**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ. ಸಂಖ್ಯೆ:** 867/2025

ಪ್ರಾಸಾ – 7

ಚಾಸಾ – 7

**ಸಾಕ್ಷಿಯು ದಿಃ 31.01.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಮಹೇಶ ಡಿ |
| ತಂದೆಯ ಹೆಸರು | : | ದೊಡ್ಡಮಾದಶೆಟ್ಟಿ |
| ವಯಸ್ಸು | : | 46 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಬನ್ನಿತಾಳಪುರ |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :–**

ಚಾಸಾ 1 ಮತ್ತು ಆರೋಪಿ ಗೊತ್ತು ನಮ್ಮೂರಿನವರು. ಚಾಸಾ 1 ರವರು ಆರೋಪಿಯ ವಿರುದ್ಧ ದೂರು ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಮದುವೆ ಮಾತುಕತೆಯಲ್ಲಿ ಭಾಗಿಯಾಗಿರುವುದಿಲ್ಲ. ಆರೋಪಿಯು ವರದಕ್ಷಿಣೆ ಕಿರುಕುಳ ನೀಡಿ ಹೆಚ್ಚುವರಿ ವರದಕ್ಷಿಣೆ ತರುವಂತೆ ಚಾಸಾ 1 ರವರಿಗೆ ಕಿರುಕುಳ ನೀಡಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ, ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಗಿದೆ)

**ಪಾಟೀ ಸವಾಲು :- ಮಾನ್ಯ ಎಪಿಪಿಯವರಿಂದ :-**

ನಾನು ನಮ್ಮ ಬೀದಿಗೆ ನಮ್ಮ ಜನಾಂಗದ ಪರವಾಗಿ ಯಜಮಾನಿಕೆ ಕೆಲಸ ಮಾಡಿಕೊಂಡಿದ್ದು, ಏನೆ ಸಮಸ್ಯೆ ಬಂದರು ನಮ್ಮಗಳ ಮಟ್ಟದಲ್ಲಿ ನ್ಯಾಯ ಪಂಚಾಯತಿ ಮಾಡಿ ಬಗೆಹರಿಸಿಕೊಳ್ಳುತ್ತಿದ್ದು, ಮಹದೇವಶೆಟ್ಟಿ ಮತ್ತು ರತ್ನಮ್ಮ ರವರಿಗೆ ಆರೋಪಿ ಮಗಳಾಗಿದ್ದು, ಚಾಸಾ 1 ರವರನ್ನು ಆರೋಪಿಗೆ ಕೊಟ್ಟು ಮದುವೆ ಮಾಡಿದ ಸಂಬಂಧವಾಗಿ ಹುಡುಗನ ಮನೆಯವರು ಹಾಗೂ ಹುಡುಗಿಯ ಮನೆಯವರು ಪರಸ್ಪರ ಮನೆಗಳಿಗೆ ಬಂದು ಹೋಗಿದ್ದು, ಮದುವೆ ಸಂಬಂಧ ಮಾತುಕತೆಯಾಡುವ ಸಂದರ್ಭದಲ್ಲಿ ಚಾಸಾ 1 ರವರು ತಂದೆ ತಾಯಿ ಆರೋಪಿಗೆ 30 ಗ್ರಾಂ ತೂಕದ ಒಂದು ಚಿನ್ನದ ಕತ್ತಿನ ಚೈನ್ ಹಾಗೂ ಉಂಗುರ ಮಾಡಿಸಿ ಕೊಡುತ್ತೇವೆ ಮತ್ತು ತಮ್ಮ ಮಗಳಿಗೆ 50 ಗ್ರಾಂ ಚಿನ್ನದ ನೆಕಲೆಸ್, ಜುಮಕಿ ಹಾಗೂ ಓಲೆ ಮಾಡಿಸಿಕೊಡುತ್ತೇವೆ ಎಂದು ಹೇಳಿದ್ದು ಅದರಂತೆ ಆರೋಪಿಯ ತಂದೆ ತಾಯಿ ಸಹ ಒಪ್ಪಿದ್ದು, ದಿಃ 09.06.2019 ರಂದು ಅವರ ಮದುವೆ ನಡೆದಿದ್ದು , ನಾವುಗಳು ಭಾಗಿಯಾಗಿದ್ದು ನಂತರ ಅನ್ಯೋನ್ಯತೆಯಿಂದ ಜೀವನ ನಡೆಸಿಕೊಂಡು ಹೋಗುತ್ತಿದ್ದು ಅವರಿಗೆ ಒಂದು ಹೆಣ್ಣು ಮಗು ಸಹ ಜನಿಸಿದ್ದು, ಆರೋಪಿಯು ಬೇಗೂರಿನಲ್ಲಿದ್ದ ಅವರ ಹೆಂಡತಿ ಮನೆಗೆ ಹೋಗಿ ಬರುತ್ತಿದ್ದರು, ನಂತರ ಆರೋಪಿಯು ಹೆಣ್ಣು ಮಗು ಆದ ಮೇಲೆ ವಿನಾಕಾರಣ ಚಾಸಾ 1 ರವರೊಂದಿಗೆ ಜಗಳ ತೆಗೆದು ಮದುವೆ ಸಮಯದಲ್ಲಿ ಕೊಟ್ಟದ್ದನ್ನು ಹೊರತುಪಡಿಸಿ ಯಾವುದೇ ವರದಕ್ಷಿಣೆ ಹಣ ನೀಡಿಲ್ಲ ಎಂಬುದಾಗಿ ಚಾಸಾ 1 ರವರಿಗೆ ಹೊಡೆದು ಬಡಿದು ವರದಕ್ಷಿಣೆಯನ್ನು ತವರು ಮನೆಯಿಂದ ತೆಗೆದುಕೊಂಡು ಬಾ ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆ ನೀಡುತ್ತಿರುವ ವಿಚಾರ ತಮಗೆ ತಿಳಿಯಿತು ಮತ್ತು ತಾವುಗಳು ಆರೋಪಿಗೆ ತನ್ನ ಹೆಂಡತಿಯನ್ನು ಚೆನ್ನಾಗಿ ನೋಡುವಂತೆ ತಿಳುವಳಿಕೆ ನೀಡಿದ್ದರು ಆದರೂ ಸಹ ಆರೋಪಿಯು ತನ್ನ ಹೆಂಡತಿಗೆ ಹಿಂಸೆ ಮತ್ತು ಕಿರುಕುಳ ನೀಡುತ್ತಿದ್ದರು, ಇದಾದ ನಂತರ ಆರೋಪಿಯು ರೂಪಾ ಎಂಬ ಆಕೆಯೊಂದಿಗೆ ಮೊಬೈಲ್ ಫೋನ್ ಸಂಪರ್ಕ ಇಟ್ಟುಕೊಂಡು ಎಸ್.ಎಂ.ಎಸ್ ಮೂಲಕ ಸಂದೇಶ ಕಳುಹಿಸುತ್ತಿದ್ದ ವಿಚಾರ ಚಾಸಾ 1 ರವರಿಗೆ ತಿಳಿದು ಕೇಳಿದ್ದಾಗ ಆರೋಪಿಯು ಆಕೆಯೊಂದಿಗೆ ಜಗಳ ಮಾಡಿ ಸ್ಪಂದಿಸದಿದ್ದಾಗ ಗುಂಡ್ಲುಪೇಟೆ ಪೊಲೀಸ್ ಠಾಣೆಗೆ ಹೋಗಿ

ದೂರು ನೀಡುವಂತೆ ತಿಳುವಳಿಕೆ ನೀಡಿದ್ದೇವು ಮತ್ತು ದಿಃ 26.06.2021 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ ಚಾಸಾ 1 ಮತ್ತು ಆರೋಪಿ ಮನೆಯಲ್ಲಿದ್ದಾಗ ಆರೋಪಿಯು ಚಾಸಾ 1 ರವರೊಂದಿಗೆ ಜಗಳ ತೆಗೆದು ನಿನ್ನ ತವರು ಮನೆಯಿಂದ ವರದಕ್ಷಿಣೆಯನ್ನು ತೆಗೆದುಕೊಂಡು ಬಾ ಇಲ್ಲದಿದ್ದರೆ ನಿನಗೆ ಇರಲು ಅವಕಾಶ ಇಲ್ಲ ತರದಿದ್ದರೆ ಸೀಮೆ ಎಣ್ಣೆ ಸುರಿದು ಬೆಂಕಿ ಹಾಕುವುದಾಗಿ ಅವಾಚ್ಯ ಶಬ್ಧಗಳಿಂದ ಬೈದು ಗಲಾಟೆ ಮಾಡಿದ್ದಾರೆ ಎಂದು ಚಾಸಾ 1 ರವರು ಅವರ ತಂದೆ ತಾಯಿಗೆ ತಿಳಿಸಿದ್ದು ಅವರು ಆ ದಿನ ಬಂದು ತಮ್ಮ ಮಗಳನ್ನು ಕರೆದುಕೊಂಡು ಹೋಗಿರುವ ವಿಚಾರ ಮಾರನೆ ದಿನ ನನಗೆ ಚಾಸಾ 9 ರವರಿಂದ ತಿಳಿದಿದ್ದು ದಿಃ 29.06.2021 ರಂದು ಚಾಸಾ 1 ರವರು ದೂರು ದಾಖಲಿಸಿದ್ದು ಮೇಲೆ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ತನ್ನ ಹೇಳಿಕೆ ನೀರಾಕರಿಸಿದ್ದರಿಂದ ಅದನ್ನು ನಿಪಿ 4 ಎಂದು ಗುರ್ತಿಸಲಾಯಿತು. ನಿಪಿ 4 ರಲ್ಲಿರುವ ವಿಚಾರಗಳು ಗೊತ್ತಿದದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು** :- **ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ